ದಿಃ 23-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಆರ್.ಆರ್ ಡಿ.ಹೆಚ್.ಆರ್ ಪರ ವಕೀಲರಿಂದಃ

ಆಸ್ತಿಗಳಲ್ಲಿ ಭಾಗವಿದೆ ಎಂದು ಈ ಪ್ರಕರಣವನ್ನು ಹೂಡಲಾಗಿದೆ. ನನಗೆ ಸುಮಾರು 46 ವರ್ಷ ವಯಸ್ಸಾಗಿದೆ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು ಸರ್ವೆ ನಂ.80 ರ ಸ್ವತ್ತಿಗೆ ಸಂಬಂಧಪಟ್ಟಂತೆ ಹೂಡಲಾಗಿದೆ. ಸರ್ವೆ ನಂ. 80 ರ ಒಟ್ಟು ವಿಸ್ತೀರ್ಣ 9 ಎಕರೆ 23 ಗುಂಟೆ. ಸದರಿ ಸ್ವತ್ತು ತೆಂಕೆರೆ ಗ್ರಾಮದಲ್ಲಿರುತ್ತದೆ. ಸದರಿ ಸ್ವತ್ತಿನ ಪೂ-ಕೆರೆ, ಪ-ಕುಂಬಾರರ ಜಮೀನು, ಉ-ಕೆರೆ, ದ-ವೀರಪ್ಪರವರ ಜಮೀನು ಇರುತ್ತದೆ. ಸದರಿ ಸ್ವತ್ತು ನನ್ನ ಮುತ್ತಾತನಾದ ಎಳೇ ತಿಮ್ಮಯ್ಯನಿಗೆ ಸೇರಿತ್ತು. ಸದರಿ ಸ್ವತ್ತು ನನ್ನ ಮುತ್ತಾತನನ್ನು ಸೇರಿ 5 ಜನರಿಗೆ ಸೇರಿದ ಸ್ವತ್ತಾಗಿತ್ತು. ಸದರಿ 5 ಜನರ ಹೆಸರುಗಳು ಪ್ರಸ್ತುತವಾಗಿ ಸರ್ವೆ ನಂ.80 ರ ಪಹಣಿಯಲ್ಲಿ ನಮೂದಾಗಿರುವುದಿಲ್ಲ. ಸದರಿ ಸ್ವತ್ತಿನ ಪಹಣಿಯಲ್ಲಿ ಪ್ರಸ್ತುತವಾಗಿ ಗೌರಮ್ಮ, ಲಕ್ಷ್ಮಮ್ಮ ಹಾಗೂ ನಂಜುಂಡಪ್ಪರವರ ಹೆಸರುಗಳು ನಮೂದಾಗಿದೆ. ನನ್ನ ತಾತನ ಹೆಸರು ದೊಡ್ಡಎಳೇತಿಮ್ಮಯ್ಯ. ನನ್ನ ತಾತ ತೀರಿಕೊಂಡ ನಂತರ ಫವತಿ ವಾರಸು ಮೂಲಕ ಖಾತೆ ಬದಲಾವಣೆಯನ್ನು ಕೋರಿ ನಾವು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಗೌರಮ್ಮ, ಲಕ್ಷ್ಮಮ್ಮ ಹಾಗೂ ನಂಜುಂಡಪ್ಪರವರ ಹೆಸರುಗಳು ಪಹಣಿಯಲ್ಲಿ ಯಾವ ಇಸವಿಯಿಂದ ಬರುತ್ತಿದೆ ಎಂಬ ಪ್ರಶ್ನೆಗೆ ಸಾಕ್ಷಿ 2002 ರಲ್ಲಿ ಪಹಣಿಗಳ ಗಣಕೀಕೃತವಾದಾಗ ಎಳೇತಿಮ್ಮಯ್ಯನ ಹೆಸರು ಬಿಟ್ಟು ಹೋಯಿತು ಎಂದು ನುಡಿಯುತ್ತಾರೆ. 2002 ರಲ್ಲಿ ನನಗೆ 20 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಅನಕ್ಷರಸ್ಥ ಎಂದು ನುಡಿಯುತ್ತಾರೆ. ಪಹಣಿಯಲ್ಲಿ ಹೆಸರನ್ನು ಕೈಬಿಡಲಾಗಿದೆ ಎಂದು ತಕರಾರನ್ನು 2002 ರಲ್ಲಿ ಸಲ್ಲಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ತಕರಾರನ್ನು 2016 ರಲ್ಲಿ ಸಲ್ಲಿಸಿದೆವು ಎಂದು ನುಡಿಯುತ್ತಾರೆ.

ನನ್ನ ಮುತ್ತಾತ ತೀರಿಕೊಂಡ ನಂತರ ಫವತಿ ವಾರಸು ಖಾತೆಗೆ ನನ್ನ ತಾತ ಅರ್ಜಿಯನ್ನು ಸಲ್ಲಿಸಿರಲಿಲ್ಲ. ನನ್ನ ತಂದೆಯ ಹೆಸರು ಕೃಷ್ಣಪ್ಪ. ನನ್ನ ತಂದೆಯೂ ಸಹ ಸದರಿ ಅರ್ಜಿಯನ್ನು ಸಲ್ಲಿಸಿರಲಿಲ್ಲ. ನನ್ನ ಮುಖ್ಯ ವಿಚಾರಣೆಯ 4 ನೇ ಖಂಡಿಕೆಯಲ್ಲಿ ಅಸಲು ದಾವೆ ಸಂಖ್ಯೆ 54/1991 ರಲ್ಲಿ ರಾಜಿ ಆಗಿದೆ ಎಂಬ ವಿಚಾರವು ಬರೆದಿರುವುದು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಯಾರು ಯಾರ ಮೇಲೆ ಯಾವ ಪರಿಹಾರಕ್ಕಾಗಿ ಹೂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಜಮೀನಿನಲ್ಲಿ ಭಾಗ ಬೇಕೆಂದು ಈ ಪ್ರಕರಣವನ್ನು ಅಂಕಮ್ಮ ಮತ್ತು ಇತರರು ಹೂಡಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 8 ನೇ ಖಂಡಿಕೆಯಲ್ಲಿ ನಮೂದಿಸಿರುವ ಅಸಲು ದಾವೆ ಸಂಖ್ಯೆ 74/2020 ರ ದಾವೆಯ ವಿಚಾರಗಳು ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 54/1991 ರಲ್ಲಿ ಹೊರಡಿಸಿದ ತೀರ್ಪಿನ ವಿರುದ್ಧ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಅಥವಾ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ನನ್ನ ತಂದೆ ಕೃಷ್ಣಪ್ಪ ಹಾಗೂ ನನ್ನ ದೊಡ್ಡಪ್ಪ ನರಸಿಂಹರೆಡ್ಡಿ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ದಿನಾಂಕ 21.02.1991 ರಂದು ಕೆ.ಪಿ ನಾರಾಯಣಪ್ಪರವರೊಂದಿಗೆ ಕ್ರಯ ಪತ್ರ

ಮಾಡಿಕೊಡುವುದಾಗಿ ಅಸಲು ದಾವೆ ಸಂಖ್ಯೆ 54/1991 ರ ದಾವೆಯಲ್ಲಿ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. 1991 ರಲ್ಲಿ ನನಗೆ 10 ವರ್ಷ ವಯಸ್ಸಾಗಿತ್ತು ಎಂದರೆ ಇರಬಹುದು. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಮಾಡಿಕೊಂಡ ರಾಜಿಯು ಸರಿ ಇಲ್ಲವೆಂದು ನನಗೆ 18 ವರ್ಷ ವಯಸ್ಸು ತುಂಬಿದ ನಂತರ ಆ ರಾಜಿಯನ್ನು ಪ್ರಶ್ನಿಸಿರುವುದಿಲ್ಲ.

ನನ್ನ ತಾತನಾದ ದೊಡ್ಡಎಳೇತಿಮ್ಮಯ್ಯನಿಗೆ 6 ಜನ ಮಕ್ಕಳು. ನನ್ನ ತಂದೆಗೆ 6 ಜನ ಮಕ್ಕಳು. ಚಿಕ್ಕಬಳ್ಳಾಪುರದ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಾವು ಯಾವುದೇ ಪ್ರಕರಣವನ್ನು ಹೂಡಿರುವುದಿಲ್ಲ. ಸರ್ವೆ ನಂ. 80 ರ ಜಮೀನು ನಮ್ಮದೆಂದು ನನ್ನ ತಂದೆಯ 6 ಜನ ಮಕ್ಕಳ ಪೈಕಿ ನನ್ನನ್ನು ಹೊರತುಪಡಿಸಿ ಇತರೆ 5 ಜನರು ಈ ನ್ಯಾಯಾಲಯದಲ್ಲಿ ಮತ್ತು ಬೇರೆ ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಅಥವಾ ಪ್ರಕರಣವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ತಾತನಿಗೆ ನರಸಿಂಹರೆಡ್ಡಿ ಮತ್ತು ಕೃಷ್ಣಪ್ಪ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಸದರಿ ನರಸಿಂಹರೆಡ್ಡಿ ಮತ್ತು ಕೃಷ್ಣಪ್ಪರವರು ತೀರಿಕೊಂಡಿದ್ದಾರೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಕೆ.ಪಿ. ನಾರಾಯಣಪ್ಪರವರಿಗೆ ಬರೆದುಕೊಟ್ಟಿದ್ದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ಅಸಲು ದಾವೆ ಸಂಖ್ಯೆ 54/1991 ರ ದಾವೆಯಲ್ಲಿ ಕ್ರಯ ಪತ್ರ ಬರೆದುಕೊಡುವುದಾಗಿ ದಿನಾಂಕ 21.02.1991 ರಂದು ರಾಜಿ ಮಾಡಿಕೊಂಡರು ಎಂದರೆ ಗೊತ್ತಿಲ್ಲ. ನನ್ನ ತಾತನ 4 ಜನ ಹೆಣ್ಣುಮಕ್ಕಳು ತೀರಿಕೊಂಡಿದ್ದಾರೆ. ಅವರ ವಾರಸುದಾರರು ಬದುಕಿದ್ದಾರೆ. ಅಸಲು ದಾವೆ ಸಂಖ್ಯೆ 54/1991 ರಲ್ಲಿ ಆದ ತೀರ್ಪನ್ನು ನನ್ನ ತಾತನ 4 ಜನ ಹೆಣ್ಣುಮಕ್ಕಳು ಅಥವಾ ಅವರ ವಾರಸುದಾರರು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ.

ಸರ್ವೆ ನಂ. 80 ರ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಯಾವುದಾದರೂ ದಾವೆಯನ್ನು ಹೂಡಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಸ್ವತ್ತಿನಲ್ಲಿ ಭಾಗ ಬರಬೇಕೆಂದು ನಾನು ಈ ಪ್ರಕರಣದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ವಜಾಮಾಡಬೇಕೆಂದು ಮಾತ್ರ ನನ್ನ ಅರ್ಜಿಯಲ್ಲಿ ಕೇಳಿದ್ದು ಭಾಗ ಬೇಕೆಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 80 ರಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ, ಹಿತಾಸಕ್ತಿ ಅಥವಾ ಭಾಗ ಇಲ್ಲದಿದ್ದರೂ ಅಂಕಮ್ಮ ಮತ್ತು ಇತರರಿಗೆ ತೊಂದರೆ ನೀಡಲು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ. 80 ರಲ್ಲಿ ಯಾರೂ ಸ್ವಾಧೀನದಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು